# MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

| Vol.48 | ENGLISH DAILY | Subscription Yearly - Rs. - | FRIDAY | 16-12-2022 |
|---|---|---|---|---|



ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.


## ಮಲೇಶಿಯನ್ ಪಾಮೆಣ್ಣೆ ದರ ಸ್ವಲ್ಪ ಹೆಚ್ಚಳ

ಇಂಡೋನೇಶಿಯಾದ ಬಯೋಡೀಸೆಲ್‌ಗೆ ಪಾಮೆಣ್ಣೆ ಬಳಕೆ ಹೆಚ್ಚಳದ ಯೋಜನೆ ಹಾಗೂ ದುರ್ಬಲ ರಿಂಗಿಟ್ಸ್ ಗಳಿಂದ ಮಲೇಶಿಯನ್ ಪಾಮೆಣ್ಣೆ ಟನ್‌ಗೆ 16 ರಿಂಗಿಟ್ಸ್ 0.41 ಶೇಕಡಾ ಹೆಚ್ಚಳ ದಾಖಲಿಸಿ 3910 ರಿಂಗಿಟ್ಸ್ ($ 884.22) ಗಳಿಗೆ ತಲುಪಿದೆ. ಆದರೂ ದರ ವಾರದ ಇಳಕೆಯಲ್ಲಿದೆ. ಇಂಡೋನೇಶಿಯಾ ಬಯೋಡೀಸೆಲ್‌ಗೆ 35 ಶೇಕಡಾ ಪಾಮೆಣ್ಣೆ ಮಿಶ್ರಣದ ಯೋಜನೆ 2023 ಜನವರಿಯಿಂದ ಜಾರಿಗೊಳಿಸಿದೆಯೆನ್ನಲಾಗಿದೆ.

## ಪೌಲ್ಟ್ರಿ ವಲಯದಿಂದ ಜೋಳ ರಫ್ತು ನಿರ್ಬಂಧಕ್ಕೆ ಬೇಡಿಕೆ

ಹೆಚ್ಚುತ್ತಿರುವ ಜೋಳದ ದರ ಹಾಗೂ ಉತ್ಪಾದನೆ ಇಳಿಕೆಯಿಂದ ಜೋಳ ಲಭ್ಯತೆ ಸರಾಗಗೊಳಿಸಲು ಅದರ ರಫ್ತು ನಿರ್ಬಂಧಿಸಲು ಪೌಲ್ಟ್ರಿ ವಲಯ ಬೇಡಿಕೆಯಿಟ್ಟಿದೆ.

## ಕಚ್ಚಾ ಸಕ್ಕರೆ ದರ 6 ವರ್ಷಗಳ ಗರಿಷ್ಠ ಮಟ್ಟಕ್ಕೆ

ಜಾಗತಿಕ ಕಚ್ಚಾ ಸಕ್ಕರೆ ದರ ಹಿಂದಿನ 6 ವರ್ಷಗಳಲ್ಲೇ ಗರಿಷ್ಠ ಮಟ್ಟ ತಲುಪಿದೆಯೆನ್ನಲಾಗಿದೆ. ಥೈಲಾಂಡ್ ಮತ್ತು ಭಾರತಗಳಿಂದ ಅಂದಾಜಿಗಿಂತ ಕಡಿಮೆ ಸಕ್ಕರೆ ರಫ್ತಾಗುವ ನಿರೀಕ್ಷೆಯಿಂದ ಜಾಗತಿಕ ದರ ಹೆಚ್ಚಳಗೊಂಡಿದೆಯೆನ್ನಲಾಗಿದೆ.

## ಮುಕ್ತ ಮಾರುಕಟ್ಟೆಯಲ್ಲಿ ಕನಿಷ್ಠ ಬೆಂಬಲ ಬೆಲೆಗಿಂತ ಹೆಚ್ಚಿದ ಭತ್ತ ದರ

ಆಂಧ್ರಪ್ರದೇಶ ಹಾಗೂ ತೆಲಂಗಾಣಗಳಲ್ಲಿ ಕನಿಷ್ಠ ಬೆಂಬಲ ಬೆಲೆಗಿಂತ ಹೆಚ್ಚಿನ ದರದಲ್ಲಿ ಮಿಲ್‌ಗಳು ಹಾಗೂ ವ್ಯಾಪಾರಿಗಳು ರೈತರಿಂದ ಭತ್ತ ಖರೀದಿಸುತ್ತಿದ್ದಾರೆನ್ನಲಾಗಿದೆ. ಸರಕಾರಿ ಖರೀದಿಗೆ ಒಣ ಮತ್ತು ಉತ್ತಮ ದರ್ಜೆಯ ಭತ್ತನೇ ಬೇಕಾಗುತ್ತದೆ. ನಂತರ ಇತರ ವೇಸ್ಟೇಜ್ ಕಳೆದು ಹಣ ಪಾವತಿ ಮಾಡುತ್ತಾರೆ. ಆದರೆ ಮಿಲ್‌ಗಳು ಮತ್ತು ವ್ಯಾಪಾರಿಗಳು ಇವನ್ನು ಗಣನೆ ಮಾಡದೆ ನೇರ ರೈತರ ಹೊಲಗಳಿಂದಲೇ ಖರೀದಿ ನಡೆಸುತ್ತಿದ್ದಾರೆನ್ನಲಾಗಿದೆ. ಇದರಿಂದ ರೈತರು ಸರಕಾರಿ ಖರೀದಿಗೆ ಕಾಯದೇ ನೇರ ಮಿಲ್‌ಗಳಿಗೆ ಹಾಗೂ ವ್ಯಾಪಾರಿಗಳಿಗೆ ಭತ್ತ ಮಾರಾಟ ಮಾಡುತ್ತಿದ್ದಾರೆನ್ನಲಾಗಿದೆ.

## ಬೇಳೆಕಾಳು ಹೆಚ್ಚಿನ ಉತ್ಪಾದನೆ ಹಾಗೂ ಆಮದಿಗೆ ಸರಕಾರ ಬೆಂಬಲ

ರೈತರು ಹೆಚ್ಚಿನ ಬೇಳೆಕಾಳು ಉತ್ಪಾದಿಸಲು ಸರಕಾರ ಅವಶ್ಯವಿರುವ ನೆರವು ಹಾಗೂ ಇನ್ನಿತರ ಕ್ರಮ ಕೈಗೊಳ್ಳುವುದೆನ್ನಲಾಗಿದೆ. ಹಾಗೇಯೇ ಬೇಳೆಕಾಳು ಆಮದಿಗೂ ಸರಕಾರ ಬೆಂಬಲ ನೀಡಲಿದೆಯೆನ್ನಲಾಗಿದೆ. ಇದರಿಂದ ದೇಶಿ ಮಾರುಕಟ್ಟೆಯಲ್ಲಿ ಬಳಕೆದಾರರಿಗೆ ಸೂಕ್ತ ದರದಲ್ಲಿ ಸಾಕಷ್ಟು ಬೇಳೆಕಾಳು ಲಭ್ಯವಾಗುವಂತೆ ನೋಡಿಕೊಳ್ಳಲಾಗುವುದೆನ್ನಲಾಗಿದೆ. ಮ್ಯಾನ್ಮಾರ್ ಹಾಗೂ ಆಫ್ರಿಕಾದ ದೇಶಗಳಲ್ಲಿ ಉತ್ತಮ ಬೇಳೆಕಾಳು ಲಭ್ಯವಾಗಲಿದೆಯೆನ್ನಲಾಗಿದೆ. ಆಮದು ಹಾಗೂ ಸಾಕಷ್ಟು ಬೇಳೆಕಾಳು ಲಭ್ಯವಾಗಲಿದೆಯೆನ್ನಲಾಗಿದೆ. ಆಮದು ಹಾಗೂ ದೇಶೀ ಉತ್ಪಾದನೆಯಿಂದ ನಿರಂತರ ಸಾಕಷ್ಟು ಬೇಳೆಕಾಳು ಪೂರೈಕೆಯಾಗುವಂತೆ ಮಾಡಲಾಗುವುದೆನ್ನಲಾಗಿದೆ.